
‘ಮೃದು ಪಲಾನ್ನವಿದೊ ಕಮ್ಮಗೆ
ಮೂಗನೊಲಿಸುತಿದೆ;
ಮನವನೆಳೆಯುತಿದೆ ಭೋಜನ ಭೋಗ ಕೆಳಸಿ.’
(1.9–106,107)



## ನಿಡುಪನೆ

ನಿಡುಪನೆ (ನಾ). ಉದ್ದವಾದ ಕೋರೆಹಲ್ಲು; ದೊಡ್ಡದಂತ
[ನಿಡು (< ನಿಡಿದು) + ಪನೆ]

ದೈತ್ಯಭೀಮ ಕುಂಭಕರ್ಣನ ಬೃಹದ್ ವ್ಯಾಯಾಮ ಶಾಲೆಯಲ್ಲಿ ರಾಕ್ಷಸ ಭಟರು ಹೊಚ್ಚ ಹೊಸ ಕಾಡಾನೆಯೊಂದನ್ನು ಅವನ ಸಮ್ಮುಖಕ್ಕೆ ಹುಗಿಸುತ್ತಾರೆ. ಕವಿಯು ಆ ಮಹಾಗಜದ ಎತ್ತರ ಬಿತ್ತರ ಬಲಾಢ್ಯತೆಗೆ ಸಾಂಗತ್ಯವಾಗಿ ಅದರ ಉದ್ದವಾದ ಸುಂದರ ದೊಡ್ಡ ದಂತವನ್ನು ‘ನಿಡುಪನೆ’ ಎಂಬ ನವೀನ ಪದದಿಂದ ಚಿತ್ರಿಸಿದ್ದಾರೆ.

‘ಕೆಂಬೆಳಕಿನಾ ಮಾಯೆ
ತಳಿದ ಮಂಕಿಂದೊಯ್ಯನೆಚ್ಚತ್ತು ತಿಳಿದವೋಲ್
ತಲೆಯೊಲೆದು, ಸೊಂಡಿಲಂ ತೊನೆದು, ನಿಡುಪನೆಗಳಂ
ತೂಗಿ, ಮೊರಗಿವಿಗಳಂ ಬೀಸಿ, ಘೀಳಿಟ್ಟೊಡನೆ
ಮುನ್ನುರ್ಗಿ ಹೋರಾಡಲನುವಾದುದಾ ಹೋರಿ
ಹೇರಾನೆ’
(3.4:597–599)

## ಪೆರ್ಕೆಳೆ

ಪೆರ್ಕೆಳೆ (ನಾ). ಗಾಢವಾದ ಸ್ನೇಹ; ಉತ್ಕಟವಾದ ಮೈತ್ರಿ; [ಪೆರ್ (< ಪಿರಿದು) + ಕೆಳೆ].

ಲಂಕೆಯಲ್ಲಿ ಸೀತೆಯನ್ನು ಹುಡುಕುತ್ತ ಬಂದ ಆಂಜನೇಯನು ಅಶೋಕವನದಲ್ಲಿ ಅವಳನ್ನು ಕಾಣುವನು. ಅವಳ ಅರ್ಘ್ಯವೆತ್ತಿದ ಕೈಗೆ ರಾಮನ ಮುದ್ರೆಯುಂಗುರವನ್ನು ಬೀಳಿಸುವನು. ತನ್ನ ಪರಿಚಯ ಮಾಡಿಕೊಳ್ಳುವನು. ಮಾತನಾಡುತ್ತ, ತನ್ನ ಬೆನ್ನೇರುವುದೇ ತಡ ಕಾಲುವೆಯಂತೆ ಸಮುದ್ರವನ್ನು ಲಂಘಿಸಿ ರಾಮಚಂದ್ರನ ಬಳಿಗೆ ಕೊಂಡೊಯ್ಯುವುದಾಗಿ ತಿಳಿಸುವನು. ಆಗ ಪತಿವ್ರತೆ ಸೀತಾಮಾತೆಯು ‘ರಾಮನ ಯಶಸ್ಸಿನ ಕಾರಣವನ್ನು ನೀನೇಕೆ ಕಸಿದುಕೊಳ್ಳುವೆ’ ಎಂದು ಹೇಳಿದ ಜಾಣಮಾತು ಹನುಮಂತನ ಅತಿ ಉತ್ಸಾಹ ಭಾವವನ್ನು ಸೂಕ್ಷ್ಮವಾಗಿ ತಟ್ಟುತ್ತದೆ.

ಅವನು ತನ್ನ ನಾಚಿಕೆಯನ್ನು ನುಂಗಿಕೊಳ್ಳುತ್ತ ‘ಭಗಿನಿ, ತಪ್ಪಾಯ್ತು, ನನ್ನ ಅಪಚಾರವನ್ನು ಮನ್ನಿಸು’ ಎಂದು ಕೇಳಿಕೊಳ್ಳುತ್ತ ‘ರಾಮನೊಡನೆಯ ನನ್ನ ಗಾಢ ಸ್ನೇಹ ಈ ಮಾತನ್ನು ನುಡಿಸಿತು. ಅನ್ಯತಾ ಭಾವಿಸಬೇಡಿ’ ಎಂದು ಕೇಳಿಕೊಳ್ಳುವನು.

ಕವಿಯು ಆ ಉತ್ಕಟ ಮೈತ್ರಿಯನ್ನು ‘ಪೆರ್ಕೆಳೆ’ ಎಂಬ ಹೊಸ ಪದ ನೇಯ್ದು ಗೆಳೆತನದ ಅಂತರ್‌ಸಂಬಂಧವನ್ನು ಪ್ರಕಟಪಡಿಸಿದ್ದಾರೆ.

‘ರಾಮನೊಳ್ ನನಗೆ ಪೆರ್ಕೆಳೆ ನುಡಿಸಿತಲ್ಲದೆಯೆ
ಭಾವಿಸದಿರನ್ಯಮಂ. ನಿನ್ನ ಸಂಕಟಮುಂ
ಪ್ರಚೋದಿಸುತ್ತಾ ಧರ್ಯಮಂ, ತಾಯಿ!’
(3.4 : 597–99)

●